ನಿಲುವಳಿ ಸೂಚನೆ ಚರ್ಚೆಗೆ ಅನುಮತಿಕೋರಿಕೆ

ರಾಜ್ಯದಲ್ಲಿ ವ್ಯಾಪಕವಾದ ಮಳೆಯಿಂದಾಗಿ ಸಾರ್ವಜನಿಕ ಖಾಸಗಿ ಆಸ್ತಿ ಪಾಸ್ತಿಗಳಿಗೆ ಹಾನಿ

ಅಧ್ಯಕ್ಷರು: ಎರಡು ನಿಲುವಳಿ ಸೂಚನೆಗಳು ಬಂದಿವೆ, ಎರಡರಲ್ಲಿ ನನಗೆ ತಿಳಿದ ಮಟ್ಟಿಗೆ ಈ ನಿಲುವಳಿ ಸೂಚನೆ ಬಗ್ಗೆ ಶ್ರೀಮಾನ್ ಸಿಂಧ್ಯರವರು ನಿನ್ನೆ ಹೇಳಿದ್ದಾರೆ. ನಿನ್ನೆ ಸಮಯ ಇದ್ದರೆ ನಾವು ತೆಗೆದುಕೊಳ್ಳುತ್ತಿದ್ದೆವು. ಇವತ್ತು ಒಬ್ಬರು 9.20 ನಿಮಿಷಕ್ಕೆ ಕೊಟ್ಟಿದ್ದಾರೆ, ಜಗದೀಶ್ ಶೆಟ್ಟರ್‌ರವರು 9.25ಕ್ಕೆ ನಿಮಿಷಕ್ಕೆ ಕೊಟ್ಟಿದ್ದಾರೆ. According to the Parliamentary Practice & Procedure by Kaul & Shakdher, ಇದನ್ನು ಯಾರು ಮೊದಲು ಕೊಡುತ್ತಾರೆ ಅವರದು ಮೊದಲು ತೆಗೆದುಕೊಳ್ಳಬೇಕು. ಎರಡೂ ಒಂದೇ ಸಮಯದಲ್ಲಿ ಬಂದರೆ ಬ್ಯಾಲೆಟ್ ಮಾಡಬೇಕೆಂದು ಇದೆ. ಈ ಮೂರು ಸೆಪರೇಟಾಗಿ ಬಂದಿರುವುದರಿಂದ ನಿಮಗಿಂತ ಮೊದಲು ಕೊಟ್ಟವರ ನಿಲುವಳಿ ಸೂಚನೆಯನ್ನು ಮೊದಲು ತೆಗೆದುಕೊಳ್ಳಬೇಕು.

+ ಶ್ರೀ ಡಿ.ವಿ. ಸದಾನಂದಗೌಡ : ನಿಮ್ಮ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ನಾನು ಅರ್ಧ-ಮುಕ್ಕಾಲು ಗಂಟೆ ತೆಗೆದುಕೊಳ್ಳುವುದಿಲ್ಲ, ತಾವು ಹಿರಿಯರಿದ್ದೀರಿ, ಹಿಂದಿನಿಂದ ಸದನ ನಡೆಸಿದವರು ಇದ್ದೀರಿ, ಸದನದಲ್ಲಿ ಇದ್ದವರು ಇದ್ದೀರಿ, ನನ್ನ ಕೈಯಲ್ಲಿ ರೂಲ್ ಪುಸ್ತಕ ಇದೆ, ಓದಿ ಆಗಿದೆ. ಈ ರೀತಿ ಆಗಬಹುದು ಎಂದು ನನಗೆ ಮೊದಲಿನಿಂದ ಮನಸ್ಸಿನಲ್ಲಿತ್ತು.

1.00 ಪಿ.ಎಂ.

ಆದರೆ ಒಂದು ಕನ್‌ವೆನ್‌ಶನ್ ಏನು ಎಂದರೆ ನಾನು ತಿಳಿದ ಮಟ್ಟಿಗೆ ಯಾವುದೇ ಒಂದು ಅಧಿಕೃತ ವಿರೋಧ ಪಕ್ಷದವರು ಕಾನೂನಿನ ಚೌಕಟ್ಟಿನಲ್ಲಿ ಏನು ರೂಲ್ಸ್‌ನ್ನು ಫ್ರೇಮ್ ಮಾಡಲಾಗಿದೆಯೋ ಆ ಪ್ರಕಾರ ಆ ದಿನದ ಅಧಿವೇಶನ ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚೆಯೇ ಅಡ್ಜರ್ನ್‌ಮೆಂಟ್ ಮೋಶನ್‌ಗೆ ನೋಟಿಸ್‌ನ್ನು ಕೊಟ್ಟರೆ ಆ ಅಧಿಕೃತ ವಿರೋಧಪಕ್ಷದವರು ಕೊಟ್ಟಿರುವುದನ್ನು ಪರಿಗಣಿಸಿ ಅವರಿಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆನ್ನುವ ಸತ್ಸಂಪ್ರದಾಯವಿದೆ ಎನ್ನುವ ಭಾವನೆ ನನಗಿದೆ. ಆ ಕಾನೂನಿನ ಚೌಕಟ್ಟಿನೊಳಗೆ ನಾವು ಒಂದು ಗಂಟೆ ಮುಂಚೆ ಅಧಿಕೃತವಾಗಿ ನಾವು ತಮಗೆ ನೋಟೀಸ್‌ನ್ನು ಕೊಟ್ಟಿದ್ದೇವೆ. ಕೇವಲ ಒಂದು ಗಂಟೆ ಮುಂಚಿತವಾಗಿ ಕೊಟ್ಟಿರುವುದೊಂದೇ ಅಲ್ಲದೆ ಕಾನೂನಿನ ಚೌಕಟ್ಟಿನಲ್ಲಿ ನಾವು ಅಧಿಕೃತ ವಿರೋಧ ಪಕ್ಷದವರಾಗಿ ಇಲ್ಲಿ ಕುಳಿತಿದ್ದೇವೆ. ಈ ಹಿನ್ನೆಲೆಯಲ್ಲಿ ಸತ್ಸಂಪ್ರದಾಯವನ್ನು ಅನುಸರಿಸುವ ನಿಟ್ಟಿನಲ್ಲಿ ಅಧಿಕೃತ ವಿರೋಧ ಪಕ್ಷದವರಾದ ನಮಗೇ ಮೊದಲು ಚರ್ಚೆ ಮಾಡಲು ಅವಕಾಶವನ್ನು ತಾವು ಮಾಡಿಕೊಡಬೇಕು. ನೀವು ಈಗಾಗಲೇ ಕಾಲ್ ಅಂಡ್ ಶೆಡ್ಯೂಲ್‌ನಲ್ಲಿರುವುದನ್ನು ಓದಿದ್ದೀರಿ. ಆದರ ಪ್ರಕಾರ, "Where notices of more than one adjournment motion are received on the same subject are taken up and the matter sought to be raised is held over, the speaker normally gives his consent to the notice which is received first... point of time." ಆದರೆ, ಅದರ ಮೇಲುಗಡೆ

ಒಂದು ಭಾಗದಲ್ಲಿ 'it is the discretionary power of the Chair' ಎಂದಿದೆ ತಮ್ಮ ಮನಸ್ಸಿಗೆ ಸೂಕ್ತವೆಂದು ಕಂಡುಬಂದರೆ, ನಿಜವಾದ ವಿರೋಧ ಪಕ್ಷವಾದ ರಾಜ್ಯದಲ್ಲಿರುವ ಅಧಿಕೃತ ವಿರೋಧ ಪಕ್ಷದ ನಾಯಕರಿಗೆ ಕೊಡಬೇಕು ಎಂದು ತಮ್ಮ ಮನಸ್ಸಿಗೆ ಅನ್ನಿಸಿದರೆ ತಮ್ಮ ಅಧಿಕಾರವನ್ನು ಉಪಯೋಗ ಮಾಡಿಕೊಡಬಹುದು. ಆದ್ದರಿಂದ ಈ ಹಿಂದಿನಿಂದ ನಡೆದು ಬಂದ ಸತ್‌ಸಂಪ್ರದಾಯ, ನೀತಿಯಂತೆ ಅಧಿಕೃತ ವಿರೋಧ ಪಕ್ಷಕ್ಕೆ ಪ್ರಥಮ ಆದ್ಯತೆಯನ್ನು ಕೊಡುವುದು ಸೂಕ್ತವೆಂದು ನನ್ನ ಅನಿಸಿಕೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದಗೌಡರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ, ಈ ಭಾಗದಲ್ಲಿ ಕುಳಿತಿರುವವರು ವಿರೋಧ ಪಕ್ಷದಲ್ಲಿ ಇದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಮಾಡುವ ಲೋಪದೋಷಗಳನ್ನು ಪ್ರಸ್ತಾಪ ಮಾಡಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವೆಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾದದ್ದು ಬಹಳ ಸೂಕ್ತ ಅಧಿಕೃತ ವಿರೋಧ ಪಕ್ಷವೆಂದು ಅವರಿಗೇ ಮೊದಲ ಆದ್ಯತೆಯನ್ನು ಕೊಡಬೇಕೆಂದು ಅವರು ಹೇಳಿದ್ದಾರೆ. ಮತ್ತು ಇದುವರೆಗೆ ನಡೆದುಕೊಂಡು ಬಂದಿರುವ ಸಂಪ್ರದಾಯದ ಬಗ್ಗೆಯೂ ಸಹ ಹೇಳಿದ್ದಾರೆ. ಈ ರೀತಿಯಾದ ಸಂಪ್ರದಾಯಗಳೆಲ್ಲದರ ಬಗ್ಗೆ ಕೌಲ್ ಅಂಡ್ ಶೆಕ್‌ದರ್‌ನಲ್ಲಿ ಕ್ರೋಢೀಕರಿಸಲಾಗಿದೆ. ಲೋಕಸಭೆಯಲ್ಲಿ, ಹೌಸ್ ಆಫ್ ಕಾಮನ್ಸ್ ಮತ್ತು ಅನೇಕ ವಿಧಾನಸಭೆಗಳಲ್ಲಿ ನಡೆಯತಕ್ಕಂಥ ಚಟುವಟಿಕೆಗಳ ಬಗ್ಗೆ ಆ ಪುಸ್ತಕದಲ್ಲಿ ಕ್ರೋಢೀಕರಿಸಲಾಗಿದೆ. ಅದರ ಬಗ್ಗೆ ಸಹ ತಾವು ಹೇಳಿ ಮೊದಲು ಯಾರು ಪ್ರಸ್ತಾವನೆಯನ್ನು ಕೊಟ್ಟಿರುತ್ತಾರೊ ಅವರಿಗೆ ಆದ್ಯತೆಯನ್ನು ಕೊಡಬೇಕು ಎಂಬ ತೀರ್ಮಾನಕ್ಕೆ ತಾವು ಬಂದಿದ್ದೀರಿ. ಆ ರೀತಿಯಾದ ಅಭಿಪ್ರಾಯವನ್ನು ತಾವು ವ್ಯಕ್ತಮಾಡಿದ್ದೀರಿ. ಅವರು ನಿಜವಾಗಿಯು ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಬೇಕಾಗಿದ್ದು ಎಲ್ಲಾ ವಿರೋಧ ಪಕ್ಷದವರ ಸಹಕಾರ ಬೇಕು ಎಂಬುದಾದರೆ ಅವರು ಗೌರವಯುತವಾಗಿ ತಮ್ಮ ಮಾತಿಗೆ, ತೀರ್ಮಾನಕ್ಕೆ ಬೆಲೆ ಕೊಡಬೇಕಾಗಿತ್ತು. ಈ ಮಾತನ್ನು ನಾನು ಒತ್ತಿ ಹೇಳಬಯಸುತ್ತೇನೆ. ಮತ್ತು ವಿರೋಧ ಪಕ್ಷದಲ್ಲಿ ಕುಳಿತಿರುವ ಇತರ ಪಕ್ಷದವರೂ ಸಹ ನಮ್ಮ ಹಾಗೆಯೇ ಎಂಬುದನ್ನು ತಿಳಿದುಕೊಳ್ಳಬೇಕಾಗಿತ್ತು. ಆದರೆ ಅದನ್ನು ಬಿಟ್ಟು ನಮಗೇ ಪ್ರಥಮ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಇದರ ಅರ್ಥವೇನೆಂದರೆ ಇಲ್ಲಿ ನಾವು ಮೊದಲು ಮಾತನಾಡಿದೆವು ಎಂಬುದು ಮುಖ್ಯವಾಯಿತೇ ವಿನಹ ರಾಜ್ಯದ ಜನರ ಸಮಸ್ಯೆಯು ಇವರಿಗೆ ಮುಖ್ಯವಾಗಲಿಲ್ಲ. ಆದ್ದರಿಂದ ಇದರ ಬಗ್ಗೆ ಜನರು ಯೋಚನೆ ಮಾಡುತ್ತಾರೆ, ಇದರ ತೀರ್ಮಾನವನ್ನು ಜನರಿಗೆ ಬಿಡುತ್ತೇವೆ. ಅವರು ಮಾತನಾಡುವಾಗ ತಮ್ಮ ನಿರ್ಷ್ಕರ್ಷೆಗೆ ಬಿಟ್ಟಿದ್ದು ಎಂದು ಹೇಳುತ್ತಾರೆ. ಆದರೆ ಯಾರಿಗೆ ಹೆಚ್ಚು ಕಾಳಜಿ ಇದೆ ಎಂಬ ಬಗ್ಗೆ ಜನರು ತೀರ್ಮಾನ ಮಾಡುತ್ತಾರೆ. ಆದ್ದರಿಂದ ತಾವು ಅವಕಾಶವನ್ನು ಕೊಡುವುದಾದರೆ ಅವರಿಗೇ ಕೊಡಿ.

ಶ್ರೀ ಡಿ.ವಿ. ಸದಾನಂದಗೌಡ : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ.

ಶ್ರೀ ಸಿ. ಭೈರೇಗೌಡ : ನಮಗೆ ಜನರ ಸಮಸ್ಯೆ ಪರಿಹಾರವು ಮುಖ್ಯ. ನಾವು ಮೊದಲು ಮಾತನಾಡಿದ್ದೇವೆ. ಅವರು ಮೊದಲು ಪ್ರಸ್ತಾಪ ಮಾಡಿದ್ದಾರೆ ಎಂಬುದು ಮುಖ್ಯವಲ್ಲ. ಜನರ ಸಮಸ್ಯೆಯ ಬಗ್ಗೆ ಚರ್ಚೆಯಾಗುವುದು ಮುಖ್ಯ. ಬೇಕಾದರೆ ಅವರೇ ಮೊದಲು ಚರ್ಚೆ ಪ್ರಾರಂಭ ಮಾಡಲಿ.

ಅಧ್ಯಕ್ಷರು: ನಿಮ್ಮ ಪಕ್ಷಗಳ ವಿಚಾರ ನಮಗೆ ಬೇಕಾಗಿಲ್ಲ. ನೀವು ಪಕ್ಷದ ಬಗ್ಗೆ ಏನು ಬೇಕಾದರೂ ಮಾಡಿಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಒಂದು ವಿಚಾರದಲ್ಲಿ ಕ್ಲಾರಿಫೈಯಾಗಬೇಕು. ಏಕೆಂದರೆ ದಾಖಲೆಯಲ್ಲಿ ತಪ್ಪು ಕಲ್ಪನೆ ಹೋಗಬಾರದು. ಮತ್ತು ರಾಜ್ಯದ ಜನರಿಗೂ ತಪ್ಪು ಕಲ್ಪನೆ ಹೋಗಬಾರದು. ತಾವು ಏನು ಹೇಳಿದ್ದೀರಿ ಅದು ಸರಿಯಾಗಿದೆ, ಅದನ್ನು ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೂ ಸಹ ಅವಶ್ಯಕವಾಗಿ ನಮಗೇ ಮೊದಲು ಆದ್ಯತೆಯನ್ನು ಕೊಡಬೇಕು ಎಂಬ ಭಾವನೆ ನಮ್ಮಲ್ಲಿ ಇದೆ. ಇದರ ಬಗ್ಗೆ ಜನರು ತೀರ್ಮಾನ ಮಾಡುತ್ತಾರೆ, ಜನರ ಬಗ್ಗೆ ಯಾರಿಗೆ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಿದೆ ಎಂದು ಅವರು ಹೇಳಿದ್ದಾರೆ. ಇವರ ಐದು ವರ್ಷದ ಕಾಳಜಿಗೆ ಜನರು ಚುನಾವಣೆಯಲ್ಲಿ ತೀರ್ಮಾನ ಕೊಟ್ಟಿದ್ದಾರೆ. ಮೊನ್ನೆ ನಡೆದ ಚುನಾವಣೆಯಲ್ಲಿ ಸಹ ತೀರ್ಮಾನ ಕೊಟ್ಟಿದ್ದಾರೆ. ಆದರೆ ಇವರು ಇಲ್ಲಿ ಮತ್ತೆ ನಮಗೆ ರೈತರ ಬಗ್ಗೆ ಬಹಳ ಕಾಳಜಿ ಇದೆಯೆಂದು ಮಾತನಾಡುತ್ತಾರಲ್ಲ? ನಾನು ಆ ವಿಚಾರದ ಬಗ್ಗೆ ಹೇಳುತ್ತಿಲ್ಲ. ನಾನು ಸಂಪ್ರದಾಯದ ಬಗ್ಗೆ ಮಾತನಾಡಿದ್ದೇನೆ, ಮತ್ತು ತಮ್ಮ ತೀರ್ಪನ್ನು ಪುನರ್‌ಪರಿಶೀಲನೆ ಮಾಡಿ ಎಂಬ ಬಗ್ಗೆ ಮಾತ್ರ ನಿವೇದನೆ ಮಾಡಿದ್ದೇನೆ. ನಮಗೆ ಜನರ, ರೈತರ ಬಗ್ಗೆ ಅವರಿಗಿಂತ ಹೆಚ್ಚು ಕಾಳಜಿ ಇದೆ. ಇದರ ಬಗ್ಗೆ ಜನರೇ ತೀರ್ಮಾನ ಕೊಟ್ಟಿದ್ದಾರೆ.

ಶ್ರೀ ಸಿ. ಭೈರೇಗೌಡ : ನಾವು ಸಂಪ್ರದಾಯಕ್ಕೆ ಬೆಲೆ ಕೊಟ್ಟಿದ್ದೇವೆ. ತಮ್ಮ ಸಂಪ್ರದಾಯದಂತೆ ತಾವೇ ಮಾತನಾಡಿ.

ಅಧ್ಯಕ್ಷರು : ಸಾಮಾನ್ಯವಾಗಿ ವಿರೋಧ ಪಕ್ಷಗಳು ಸರ್ಕಾರದ ಲೋಪದೋಷಗಳನ್ನು ಎತ್ತಿಹಿಡಿಯಲು ಇರುತ್ತವೆ. ಎಲ್ಲಾ ವಿರೋಧ ಪಕ್ಷಗಳ ಕರ್ತವ್ಯ ಇದೇ ಆಗಿದೆ. ಆ ರೀತಿ ಲೋಪ ದೋಷಗಳನ್ನು ಎತ್ತಿ ಹಿಡಿಯುವಾಗ ನೀವು ಎತ್ತಿ ಹಿಡಿದರೇನು ಅವರು ಎತ್ತಿ ಹಿಡಿದರೇನು? ಮಾನ್ಯ ಸಿಂಧ್ಯರವರು ಸ್ವಲ್ಪ ದೊಡ್ಡ ಮನಸ್ಸು ಮಾಡಿ ಅವರೇ ಮಾತನಾಡಲಿ ಎಂದು ಹೇಳಿದ್ದಾರೆ. ತಾವು ಸಹ ಹಾಗೆಯೇ ಹೇಳಬಹುದಾಗಿತ್ತು.

ಶ್ರೀ ಡಿ.ವಿ. ಸದಾನಂದಗೌಡ : ನಾವು ಹೊಸಬರಿದ್ದೇವೆ. ಸಂಪ್ರದಾಯಗಳು, ವಿಧಾನಗಳು, ಮತ್ತೊಂದು ಇದೆಯಲ್ಲ, ಅದರ ಬಗ್ಗೆ ನಾನು ಹೇಳುತ್ತಿದ್ದೇನೆಯೇ ಹೊರತು ಅವರು ಮಾತನಾಡಬಾರದು ಎಂದು ನಾನು ಹೇಳಿಲ್ಲ. ತಮ್ಮ ಆದೇಶದಂತೆ ಅವರೇ ಮಾತನಾಡಲಿ.

ಅಧ್ಯಕ್ಷರು : ಸಂಪ್ರದಾಯಗಳು ಏನಿದೆ ಎಂದರೆ ರಾಜ್ಯಪಾಲರ ಭಾಷಣದ ಸಮಯದಲ್ಲಿ, ಬಜೆಟ್ ಅಧಿವೇಶನದ ಸಮಯದಲ್ಲಿ ಅಧಿಕೃತ ವಿರೋಧ ಪಕ್ಷದವರಿಗೆ ಮೊದಲ ಆದ್ಯತೆಯನ್ನು ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ದಯವಿಟ್ಟು ಅಪಾರ್ಥವಾಗಬಾರದು. ಮಾನ್ಯ ಭೈರೇಗೌಡರು ಕೆಲವೊಂದು ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನಾವು ಅಕ್ಯಾಡಮಿಕ್

ಇಂಟರೆಸ್ಟ್‌ನಿಂದ ನಾವು ಮಾತನಾಡಿದ್ದು. ಅವರು ಮಾತನಾಡಿದರೂ ಅಷ್ಟೆ ನಾವು ಮಾತನಾಡಿದರೂ ಅಷ್ಟೆ. ಅವರು ಮಾತನಾಡಿದ ನಂತರ ನಾವು ಮಾತನಾಡುತ್ತೇವೆ, ನಾವು ಮಾತನಾಡಿದ ನಂತರ ಅವರು ಮಾತನಾಡುತ್ತಾರೆ. ಇಲ್ಲಿ ಅತಿವೃಷ್ಟಿಯಿಂದ ಆಗಿರುವ ಅನಾಹುತದ ಬಗ್ಗೆ ಮುಖ್ಯವಾಗಿ ಚರ್ಚೆಯಾಗಬೇಕು. ಅದು ಬಿಟ್ಟು ಅಪಾರ್ಥಕ್ಕೆ ಒಳಗಾಗಬಾರದು. ನಾವು ಅವರು ಇಬ್ಬರೂ ಸಹ ಇದರ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆದರೆ ಪದ್ಧತಿ ಏನಿದೆ ಅದರ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇವೆಯೇ ಹೊರತು ಮತ್ತಾವುದೇ ಉದ್ದೇಶ ನಮಗೆ ಇಲ್ಲ. ತಾವು ಏನು ರೂಲಿಂಗ್ ಕೊಟ್ಟಿದ್ದೀರಿ ಅದಕ್ಕೆ ವಿರುದ್ಧವಾಗಿ ನಾವು ಮಾತನಾಡಬೇಕೆಂದಿಲ್ಲ. ಆದರೆ ಸದನದ ಗಮನಕ್ಕೆ ತರುವ ಉದ್ದೇಶದಿಂದ ನಮ್ಮ ಉಪನಾಯಕರು ಆ ವಿಚಾರದ ಬಗ್ಗೆ ಹೇಳಿದ್ದಾರೆ. ಸಿಂಧ್ಯಾರವರು ಬೇಕಾದರೆ ಮೊದಲು ಪ್ರಾರಂಭ ಮಾಡಲಿ, ಅದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿಲ್ಲ.

ಅಧ್ಯಕ್ಷರು : ಸದನವನ್ನು ಎರಡು ಗಂಟೆಗೆ ಮುಂದೂಡಿದ ಮೇಲೆ ಮಧ್ಯಾಹ್ನ 3 ಗಂಟೆಯಿಂದ 6 ಗಂಟೆಯವರೆಗೆ ಇರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದರ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡನೆ ಮಾಡುವಲ್ಲಿ ವಿರೋಧ ಪಕ್ಷದವರಾದ ನಾವುಗಳು ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ತಮ್ಮ ಮನಸ್ಸನ್ನು ಒಲಿಸುವಲ್ಲಿ ಪ್ರಯತ್ನ ಮಾಡುತ್ತೇವೆ. ತಾವು ಇದರ ಬಗ್ಗೆ ಒಪ್ಪಿಕೊಂಡುಬಿಟ್ಟರೆ ಬಾಕಿ ವಿಚಾರದ ಬಗ್ಗೆ ನಾವು ನಿಗದಿ ಮಾಡಬಹುದು. ಅದಕ್ಕೂ ಮೊದಲು ಸರ್ಕಾರದ ಮೇಲೆ ನನ್ನದೊಂದು ಅಕ್ಷೇಪವೇನೆಂದರೆ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತೇವೆಂದು ನಾವು ನಿನ್ನೆಯೇ ಹೇಳಿದ್ದೆವು. ಆದರೆ ಕಂದಾಯ ಸಚಿವರು ಇಲ್ಲಿಯವರೆಗೆ ಬಂದಿಲ್ಲ. ದಯಮಾಡಿ ಕಂದಾಯ ಸಚಿವರನ್ನು ತುರ್ತಾಗಿ ಕರೆಯಿಸಬೇಕು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ ನಿಯಮ 69ರ ಅಡಿಯಲ್ಲಿ ಒಂದು ಗಂಟೆ ಚರ್ಚೆಗೆ ತೆಗೆದುಕೊಳ್ಳುವುದಾಗಿ ನಿನ್ನೆ ನಾನು ಹೇಳಿದ್ದೆ. ಆದ್ದರಿಂದ ಇದನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಬಿಟ್ಟು ನಿಯಮ 69ರ ಅಡಿಯಲ್ಲಿ ಏನು ಒಂದು ಗಂಟೆ ಚರ್ಚೆಗೆ ಅವಕಾಶ ಇದೆ ಆ ಅವಧಿಯನ್ನು ಹೆಚ್ಚು ಮಾಡಿಕೊಂಡು ಅಲ್ಲಿ ಚರ್ಚೆ ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಬಹಳ ಗಹನವಾಗಿರುವ ವಿಚಾರ. ಈ ಅಧಿವೇಶನದ ಸಮಯದಲ್ಲಿ ನಾಲ್ಕೈದು ವಿಚಾರವನ್ನು ನಾವು ಸರ್ಕಾರಕ್ಕೆ ಹೈಲೈಟ್ ಮಾಡಬೇಕಾಗಿದೆ.

ಅಧ್ಯಕ್ಷರು : ನಿಲುವಳಿ ಸೂಚನೆ ಬೇಡ, ಇಷ್ಟು ಗಂಟೆಗಳ ಕಾಲ ಚರ್ಚೆ ಮಾಡೋಣವೆಂದು ಅವರು ನೀವು ತೀರ್ಮಾನ ಮಾಡಿ.

ಶ್ರೀ ಎಸ್.ಎಂ. ಕೃಷ್ಣ : ನಿಲುವಳಿ ಸೂಚನೆ ಬಿಟ್ಟು ಬೇಕಾದರೆ ಇದರ ಬಗ್ಗೆ ಎಷ್ಟು ಹೊತ್ತು ಬೇಕಾದರೆ ಸದನದಲ್ಲಿ ಚರ್ಚೆಯಾಗಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದರ ಬಗ್ಗೆ ಮುಖ್ಯಮಂತ್ರಿಯವರು ಎರಡನೆ ಬಾರಿ ಹೇಳುತ್ತಿದ್ದಾರೆ. ಕಳೆದ ಅಧಿವೇಶನದ ಸಂದರ್ಭದಲ್ಲಿ ಕಂಬಾಲಪಲ್ಲಿ ವಿಚಾರದ ಬಗ್ಗೆ ನಿಲುವಳಿ ಸೂಚನೆ ಬೇಡ ಹಾಗೆಯೇ ಚರ್ಚೆಯಾಗಲಿ ಎಂದು ಹೇಳಿದ್ದರು. ಅದೇ ರೀತಿ ರಾಜ್ಯದ ಮಹತ್ತರವಾಗಿರುವ ಸಮಸ್ಯೆಯ ಬಗ್ಗೆ ಚರ್ಚೆ ಮಾಡೋಣವೆಂದಿದ್ದಾರೆ.

ನಿಯಮ 69ರ ಮೇರೆಗೆ

ರಾಜ್ಯದಲ್ಲಿ ವ್ಯಾಪಕವಾದ ಮಳೆಯಿಂದಾಗಿ ಸಾರ್ವಜನಿಕ ಖಾಸಗಿ ಆಸ್ತಿಪಾಸ್ತಿಗಳಿಗೆ ಹಾನಿ

ಅಧ್ಯಕ್ಷರು : ಇದನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಸಮಯವನ್ನು ಸಂದರ್ಭಾನುಸಾರ ನಿಗಧಿ ಮಾಡಿಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ದಯಮಾಡಿ ಮೊದಲು ಕಂದಾಯ ಸಚಿವರನ್ನು ಕರೆಯಿಸಬೇಕಾಗಿ ವಿನಂತಿಸುವೆ. ಮುಖ್ಯಮಂತ್ರಿಗಳು ಎಂದರೆ ಸರಿಯಾಗುವುದಿಲ್ಲ. ಮೊದಲನೆಯ ಸಾಲಿನಲ್ಲಿ ಇಂದಿನ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗಿರುವವರಲ್ಲಿ ಮಾನ್ಯ ಘೋರ್ಪಡೆಯವರನ್ನು ಬಿಟ್ಟರೆ ಉಳಿದವರ್ಯಾರು ಇಲ್ಲ. ಕಂದಾಯ ಸಚಿವರು ಇಲ್ಲದಿದ್ದರೆ ಬೇರೆಯವರು ಇಲ್ಲವೆ?

ಶ್ರೀ ಎಸ್.ಎಂ. ಕೃಷ್ಣ : ಕಂದಾಯ ಸಚಿವರು ವಿಧಾನ ಪರಿಷತ್ತಿನಲ್ಲಿ ಉತ್ತರವನ್ನು ಕೊಡುತ್ತಿದ್ದಾರೆ. ಅವರ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗೆ ನಾನು ಬೇರೆಯವರಿಂದ ಹೇಳಿಸಲು ಸಾಧ್ಯವೆ? ನಾನು ಇದ್ದೇನಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಕಂದಾಯ ಸಚಿವರನ್ನು ಇಲ್ಲಿಗೆ ಕರೆಸಿ ಎಂದರೆ ಅದಕ್ಕೆ ಅವರು ಆಗುವುದಿಲ್ಲವೆಂದರೆ ಬೆಳಿಗ್ಗೆ 9.30 ಗಂಟೆಗೆ ವಿಧಾನಪರಿಷತ್ತಿನಲ್ಲಿ ಪ್ರಶ್ನೋತ್ತರ ಪ್ರಾರಂಭವಾಗಿದೆ. ಅಲ್ಲಿ ಇನ್ನೂ ಮುಗಿದಿಲ್ಲ ನಡೆಯುತ್ತಿದೆ ಎಂದರೆ ಹೇಗೆ?

ಶ್ರೀ ಎಸ್.ಎಂ. ಕೃಷ್ಣ : ಅದು ಬೇಗ ಪ್ರಾರಂಭವಾಗಲಿಲ್ಲ. ಏಕೆಂದರೆ ಸಭೆಗಳು ನಡೆಯುವ ರೀತಿ ನೀತಿಗಳು ಕಳೆದ 25 ವರ್ಷಗಳಿಂದ ನಮಗೂ ನಿಮಗೂ ಗೊತ್ತಲ್ಲ. ಆದುದರಿಂದ ಇನ್ನು ಪ್ರಾರಂಭವಾಗಿರಲಿಲ್ಲ. ಈಗ ವಿಧಾನಪರಿಷತ್ತು ಪ್ರಾರಂಭವಾಗಿದೆ. ಅಲ್ಲಿ ಉತ್ತರ ಮುಗಿದ ತಕ್ಷಣ ಧಾವಿಸಿ ಇಲ್ಲಿಗೆ ಬರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಚುಚ್ಚಿ ಮಂತ್ರಿಗಳು "ಧಾವಿಸಿ" ಬರುತ್ತಾರೆ ಎಂದು ಹೇಳಿದ್ದಾರೆ. ಅವರ ಮನಸ್ಸಿನಲ್ಲಿ ಏನೋ ದುಗುಡ ಇದೆ. ಅದನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಕೆಲವು ಬಾರಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರು ಸಹ ಇಲ್ಲಿ ಕುಳಿತುಕೊಂಡು ಕಹಿಯಾಗಿ ಮಾತನಾಡಿದ್ದಾರೆ. ಈಗ ಅಲ್ಲಿ ಕುಳಿತುಕೊಂಡು ಕಹಿಯಾಗಿ ನಮ್ಮ ಬಗ್ಗೆ ಮಾತನಾಡುತ್ತಾರೆ. ಅದರ ಬಗ್ಗೆ ನಮಗೆ ಏನೂ ಕೋಪ ಇಲ್ಲ.